## ಭಾರತೀಯ ಜನತಾ ಪಾರ್ಟಿ
## (ಕೇಂದ್ರ ಕಚೇರಿ)
## ೧೧, ಅಶೋಕ ರಸ್ತೆ, ನವದೆಹಲಿ-೧೧೦೦೦೧
## ದೂರವಾಣಿ:೨೩೦೦೫೭೦೦, ಫ್ಯಾಕ್ಸ್: ೨೩೦೦೫೭೮೭

ದಿನಾಂಕ: ಫೆಬ್ರವರಿ ೦೩,೨೦೧೪

**ರಾಷ್ಟ್ರೀಯ ವಕ್ತಾರೆ ಶ್ರೀಮತಿ ನಿರ್ಮಲ ಸೀತಾರಾಮನ್ ನೀಡಿದ ಪತ್ರಿಕಾ ಹೇಳಿಕೆ**

ಕಾಂಗ್ರೆಸ್ ಪಕ್ಷವು ಗುಜರಾತ್ ಮುಖ್ಯಮಂತ್ರಿ, ಗುಜರಾತ್ ಭಾಜಪ ಮತ್ತು ಗುಜರಾತ್ ಸರ್ಕಾರದ ವಿರುದ್ಧ ಟೀಕೆ ಮಾಡಲು ಲಭಿಸುವ ಅವಕಾಶವನ್ನು ಯಾವುದೇ ಪೂರ್ವಾಲೋಚನೆಯಿಲ್ಲದೆ ಬಳಸಿಕೊಳ್ಳುತ್ತದೆ. ಈ ಬಾರಿಯೂ, ಯಾವುದೇ ತಯಾರಿಯಿಲ್ಲದೆ, ಲಭಿಸಿದ ಅವಕಾಶವನ್ನು ಬಳಸಿಕೊಂಡು ದೋಷಾರೋಪಣೆ ಮಾಡಿದ ಕಾಂಗ್ರೆಸ್ ಪಕ್ಷ ಪ್ರಕರಣಕ್ಕೆ ಅವರ ಪಕ್ಷದ ವೈಫಲ್ಯವೇ ಕಾರಣ ಎಂಬ ಅಂಶವನ್ನು ನಂತರ ಅರಿತುಕೊಂಡಿತು.

ವರಮಾನ ಅಥವಾ ಬಳಕೆ ವೆಚ್ಚ ಆಧರಿಸಿ ಬಡತನ ರೇಖೆ ಮಟ್ಟ ನಿರ್ಧರಿಸುವ ಕೆಲಸ ಕೇಂದ್ರ ಸರ್ಕಾರದ್ದಾಗಿದೆ. ಕೇಂದ್ರ ಸರ್ಕಾರ ಈ ಮಟ್ಟವನ್ನು ಪರಿಷ್ಕರಿಸಿದರೂ, ಕೇಂದ್ರದ ಸಂಬಂಧಪಟ್ಟ ಇಲಾಖೆ ಸೂಚಿಸುವವರೆಗೂ ಪರಿಷ್ಕೃತ ಮಾನದಂಡವನ್ನು ರಾಜ್ಯಗಳು ಜಾರಿಗೆ ತರುವಂತಿಲ್ಲ. ನಗರ/ಗ್ರಾಮೀಣ ಪ್ರದೇಶಗಳಲ್ಲಿ ಮಾಸಿಕ ತಲಾವಾರು ವರಮಾನ ಮಿತಿ ೫೦೧/೩೨೪ ರೂಪಾಯಿಗಳನ್ನು ಕೇಂದ್ರ ಸರ್ಕಾರವೇ ೨೦೦೪ರಲ್ಲಿ ನಿಗದಿ ಪಡಿಸಿತ್ತು. ಕೇಂದ್ರ ಸರ್ಕಾರದ ಆಹಾರ ಮತ್ತು ನಾಗರಿಕ ವಿತರಣಾ ಇಲಾಖೆ ಈ ಮಾನದಂಡವನ್ನು ಗುಜರಾತ್ ಸರ್ಕಾರಕ್ಕೆ ಸೂಚಿಸಿತ್ತು. ಈ ಮಾನದಂಡವನ್ನು ಗುಜರಾತ್ ಸರ್ಕಾರ ನಿಗದಿ ಪಡಿಸಿದ್ದಲ್ಲ. ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸಲು ವರಮಾನದ ಜೊತೆಗೆ ಟೆಲಿವಿಝನ್, ರೇಡಿಯೋ ಅಥವಾ ಸೈಕಲ್ ನಂತಹ ಸ್ವತ್ತಿನ ಪರಿಗಣನೆ ಮಾಡುವಂತೆಯೂ ಸೂಚಿಸಲಾಗಿದೆ. ಈ ವಿಧಾನವನ್ನು ಸ್ವತ್ತು ಆಧರಿತ ಮಾನದಂಡವೆಂದು ಕರೆಯಲಾಗುತ್ತದೆ.

ಕೇಂದ್ರ ಸರ್ಕಾರವೇ ನಿಗದಿ ಪಡಿಸಿದ್ದ ಸ್ವತ್ತು ಆಧರಿತ ಮಾನದಂಡ ಅನುಸರಿಸಿ ಗುಜರಾತ್‌ನಲ್ಲಿ ೨೧ ಲಕ್ಷ ಕುಟುಂಬಗಳನ್ನು ಬಿಪಿಎಲ್ ಕುಟುಂಬಗಳೆಂದು ಗುರುತಿಸಲಾಗಿದೆ. ಆದರೆ ಈ ಮಾನದಂಡ ಅನುಸರಿಸಿ ಅರ್ಹರಾದ ಎಲ್ಲಾ ಬಡ ಕುಟುಂಬಗಳನ್ನು ಬಿಪಿಎಲ್ ವರ್ಗಕ್ಕೆ ಸೇರಿಸಲು ಸಾಧ್ಯವಾಗದ ಕಾರಣ, ಹೆಚ್ಚುವರಿಯಾಗಿ ೧೧ ಲಕ್ಷ ಕುಟುಂಬಗಳನ್ನು ಬಿಪಿಎಲ್ ವರ್ಗಕ್ಕೆ ಸೇರಿಸಿ, ರಾಜ್ಯ ಸರ್ಕಾರವೇ ತನ್ನ ಸ್ವಂತ ಖರ್ಚಿನಲ್ಲಿ ಇವರಿಗೆ ಸವಲತ್ತು ಒದಗಿಸುತ್ತಿದೆ. ಆದ್ದರಿಂದ ಕೇವಲ ೨೧ ಲಕ್ಷ ಕುಟುಂಬಗಳ ಬದಲು, ಒಟ್ಟು ೩೨ ಲಕ್ಷ ಕುಟುಂಬಗಳಿಗೆ ಸೌಕರ್ಯ ಕಲ್ಪಿಸಿಕೊಡಲಾಗಿದೆ. ಬಡತನ ನಿರ್ಮೂಲನೆ ಕಾರ್ಯಕ್ರಮದಡಿ ಇದೊಂದು ಉತ್ತಮ ಮಾದರಿ ಎಂದು ಸರ್ವೋಚ್ಚ ನ್ಯಾಯಾಲಯವೇ ಮೆಚ್ಚುಗೆ ವ್ಯಕ್ತಪಡಿಸಿದೆ.

ಬಡತನ ಲೇಖೆಯ ಮಾನದಂಡ ತಕ್ಷಣ ಪರಿಷ್ಕರಿಸುವಂತೆ ಗುಜರಾತ್ ಸರ್ಕಾರ ೨೦೦೪ರಿಂದಲೇ ಹಲವಾರು ಬಾರಿ ಮಾಡಿದ ಮನವಿಗಳಿಗೆ ಕೇಂದ್ರ ಸರ್ಕಾರ ಈವರೆಗೂ ಸ್ಪಂದಿಸಿಲ್ಲ. ಸುಮಾರು

೧೦ ವರ್ಷಗಳಿಂದ ಒಂದು ಸಮಿತಿಯ ನಂತರ ಮತ್ತೊಂದು ಸಮಿತಿಗಳು ಮಾನದಂಡ ಪರಿಷ್ಕರಿಸುವ ವಿಚಾರದ ಮಂಥನ ನಡೆಸಿದ್ದರೂ, ಯಾವುದೇ ಬದಲಾವಣೆ ಆಗಿಲ್ಲ. ಕಾಂಗ್ರೆಸ್ ಪಕ್ಷದ ಹೇಳಿಕೆಯಂತೆ ಶ್ರೀ ನರೇಂದ್ರ ಮೋದಿ ಅವರು ಯೋಜನಾ ಆಯೋಗವನ್ನು ತರಾಟೆಗೆ ತೆಗೆದುಕೊಳ್ಳಲು, ೧೦ ವರ್ಷಗಳಿಂದ ಮನವಿಗೆ ಸ್ಪಂದಿಸದಿರುವುದೇ ಮುಖ್ಯ ಕಾರಣ.

ಆದಕಾರಣ, ಗುಜರಾತ್ ಮುಖ್ಯಮಂತ್ರಿಯ ವಿರುದ್ಧ ಟೀಕಾಪ್ರಹಾರವನ್ನು ವೀರಾವೇಶದಿಂದ ಮಾಡುತ್ತಿರುವ ಕಾಂಗ್ರೆಸ್ ಪಕ್ಷ, ತಾನೇ ಲೋಪದ ಆರೋಪಿ ಎಂದು ಅರ್ಥ ಮಾಡಿಕೊಳ್ಳಲಿಲ್ಲ. ಮಾನದಂಡ ಪರಿಷ್ಕರಿಸುವಂತೆ ಕೋರಿಕೆ ಸಲ್ಲಿಸುವ ಮನವಿ ಪತ್ರಗಳು ಮತ್ತು ಸ್ಮರಿಸುವ ಸಲುವಾಗಿ ಬರೆದ ಪತ್ರಗಳ ದಿನಾಂಕಗಳನ್ನು ಗುಜರಾತ್ ಸರ್ಕಾರ ಬಿಡುಗಡೆ ಮಾಡುತ್ತದೆ ಎಂಬ ಖಚಿತ ವಿಶ್ವಾಸ ಭಾಜಪಗಿದೆ. ಈ ಮೂಲಕ ವಿಚಾರ ಸ್ಪಷ್ಟವಾಗುತ್ತದೆ.

ವ್ಯಂಗ್ಯವಾಡುವ ಹಕ್ಕು ಮತ್ತು ಸುಳ್ಳು ನುಡಿಯುವ ಹಕ್ಕು

ಸ್ವಯಂ ಪ್ರೇರಿತ ವಿಚಾರದಲ್ಲಿ ಮಂಥನ ನಡೆಸುವ ಪ್ರಯತ್ನವನ್ನು ಆಮ್ ಆದ್ಮಿ ಪಾರ್ಟಿ ಮಾಡುತ್ತಿದೆ ಎಂಬ ಅನಿಸಿಕೆ ನಮ್ಮದು. ದೇಶದಲ್ಲಿ ಯಾರಿಗೇ ಆಗಲಿ ಸಂವಿಧಾನ ಆ ಹಕ್ಕು ನೀಡಿಲ್ಲ. ಪರ್ಯಾಯ ರಾಜಕೀಯದ ಭರವಸೆ ನೀಡಿದ ಅವರು ವಿರೋಧಿಗಳ ವಿರುದ್ಧ ವ್ಯಂಗ್ಯವಾಡುವ ಮೂಲಭೂತ ಹಕ್ಕು ಮತ್ತು ಸುಳ್ಳು ಆರೋಪ ಹೊರಿಸುವ ಹಕ್ಕನ್ನು ತಮಗೆ ತಾವೇ ನೀಡಿದ್ದಾರೆ. ವಿಶ್ವಾಸಾರ್ಹತೆ, ಜನಮನ್ನಣೆ ಹಾಗೂ ತಕ್ಷಣವೇ ತನ್ನತ್ತ ಜನರ ಗಮನ ಸೆಳೆಯುವ ಪ್ರಯತ್ನದಲ್ಲಿ, ಭಾಜಪ ಪಕ್ಷದ ಪ್ರಮುಖರಲ್ಲಿ ಕೆಲವೊಂದು ನಾಯಕರ ಹೆಸರುಗಳನ್ನು ಹಾಳು ಮಾಡುವ ಸತತ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ಭಾಜಪ ನಾಯಕರ ಹೆಸರುಗಳನ್ನು ನಮೂದಿಸಿದ ನಂತರ ಅವರ ಆರೋಪಗಳನ್ನು ಸಾಬೀತು ಪಡಿಸುವ ಸಾಕ್ಷಾಧಾರಗಳನ್ನು ನೀಡದೆಯಿರುವ ಎಎಪಿ ಪಕ್ಷದ ನಾಯಕರ ಕ್ರಮ ಖಂಡನೀಯವಾಗಿದೆ. ವ್ಯಂಗ್ಯ, ಅಪಪ್ರಚಾರ ಮತ್ತು ತೇಜೋವಧೆಯ ಆರೋಪಗಳನ್ನು ಮಾಡಲಾಗುತ್ತಿವೆ.

ಕಳ್ಳರು ಎಂದು ದೂರಿದ್ದ ಭ್ರಷ್ಟ ಕಾಂಗ್ರೆಸ್ ಪಕ್ಷದ ಬೆಂಬಲ ಪಡೆಯಲು ಯಾವುದೇ ಸಂಕೋಚ ಪಡದ ಎಎಪಿ ಹಾಗೂ ಕಾಂಗ್ರೆಸ್ ಬೆಂಬಲದೊಂದಿಗೆ ಎಂದೂ ಸರ್ಕಾರ ರಚಿಸುವುದಿಲ್ಲವೆಂದು ಮಕ್ಕಳ ಹೆಸರಿನಲ್ಲಿ ಪ್ರಮಾಣ ಮಾಡಿದ ದೆಹಲಿ ಮುಖ್ಯ ಮಂತ್ರಿ ಇಂದು ತಾವು ಆಡಿದ ಎಲ್ಲಾ ವಿಚಾರಗಳಿಗೂ ವಿಮುಖರಾಗಿ ವರ್ತಿಸುತ್ತಿದ್ದಾರೆ.

- ಭ್ರಷ್ಟ ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ಅಧಿಕಾರ ಉಳಿಸಿಕೊಂಡಿದ್ದಾರೆ.
- ಭ್ರಷ್ಟರ ಪಟ್ಟಿಯಲ್ಲಿ ಶೀಲಾ ದೀಕ್ಷಿತ್ ಅವರ ಹೆಸರು ಸೇರಿಸುವ ಧೈರ್ಯ ತೋರಿಲ್ಲ.
- ಈ ವರೆಗೂ, ಕಾಂಗ್ರೆಸ್ ಹಾಗೂ ಅದರ ನಾಯಕರ ವಿರುದ್ಧ ಎಎಪಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಜನರಿಂದಲೇ ಸಾಕ್ಷಾಧಾರಗಳನ್ನು ಕೋರಲಾಗುತ್ತಿದೆ. ಹಾಗಿದ್ದಲ್ಲಿ ಅಧಿಕಾರಕ್ಕೆ ಬರುವ ಮುನ್ನ ಸಾಕ್ಷಾಧಾರಗಳು ಇಲ್ಲದೆ ಎಎಪಿ ಆರೋಪ ಹೊರಿಸಿತ್ತೆ?
- ದೆಹಲಿಯಲ್ಲಿ ವಿದ್ಯುತ್ ಬೆಲೆಗಳು ಮೇಲೇರುತ್ತಿವೆ. ಎಎಪಿ ಭರವಸೆ ಏನಾಯಿತು?

- ದೆಹಲಿಯಲ್ಲಿ ಹಾಲಿನ ಬೆಲೆ ಹೆಚ್ಚಿದೆ. ಕೇವಲ ದೆಹಲಿ ಹೀಗಾಗಲು ಕಾರಣವೇನು ಎಂದು ಎಎಪಿ ಮತ್ತು ಕಾಂಗ್ರೆಸ್ ಉತ್ತರಿಸಬೇಕಾಗಿದೆ.
- ಯುಗಾಂಡ ಮೂಲದ ಮಹಿಳೆಯ ಮೇಲೆ ಘರ್ಷಣೆ ನಡೆಸಿದ ಎಎಪಿ ಎಲ್ಲಿದೆ? ಈಶಾನ್ಯ ರಾಜ್ಯದ ನಮ್ಮ ಸೋದರರರನ್ನು ಬೆಂಬಿಸಲು ಅವರೇಕೆ ಕಾಣುತ್ತಿಲ್ಲ?

ಸಾಂಸ್ಥಿಕ ಆಡಳಿತಾತ್ಮಕ ಯಂತ್ರದ ಮೂಲಕ ದೆಹಲಿಯ ಆಡಳಿತ ನಡೆಸುವತ್ತ ಎಎಪಿ ತಮ್ಮ ಗಮನ ಹರಿಸಲಿ ಎಂದು ಭಾಜಪ ಬಯಸುತ್ತದೆ. ದಿನಕ್ಕೊಂದು ಪತ್ರಿಕಾಗೋಷ್ಠಿ ಕರೆದು, ಆಧಾರರಹಿತ ಮತ್ತು ಸಾಕ್ಷಾಧಾರಗಳಿಲ್ಲದ ವಿನೋದಕಾರಿ ಸೂಚಿ ನೀಡುವುದರಿಂದ ಉತ್ತಮ ಆಡಳಿತ ನಡೆಸಿದಂತಾಗುವುದಿಲ್ಲ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ದೆಹಲಿ ಜನತೆ ಮತ್ತಷ್ಟು ಅಸಹಾಯಕ ಪರಿಸ್ಥಿತಿ ಅನುಭವಿಸುತ್ತಿದೆ.

(ಇಆರ್. ಅರುಣ್ ಕುಮಾರ್ ಜೈನ್)
ಕಚೇರಿ ಕಾರ್ಯದರ್ಶಿ